ಕರ್ನಾಟಕ ಸರ್ಕಾರ

K-tech

INDIAN INSTITUTE OF SCIENCE
भारतीय विज्ञान संस्थान

KSCST

# ಸೈಸೆಕ್ ಕಾಮಿಕ್ ಕೈಪಿಡಿ

ಮಕ್ಕಳಿಗಾಗಿ ಕಾಮಿಕ್ಸ್


ರಚನೆ: ಎಚ್. ಡುಂಡಿರಾಜ್

ಚಿತ್ರ: ಸಂತೋಷ್ ಸಸಿಹಿತ್ಲು




CySecK
Cyber Security Karnataka
K-Tech CoE for Cyber Security

ಸೈಸೆಕ್
ಸೈಬರ್ ಸೆಕ್ಯುರಿಟಿ ಕರ್ನಾಟಕ
ಕೆ-ಟೆಕ್ ಉನ್ನತಜ್ಞಾನ ಕೇಂದ್ರ

CySecKCoE

CySecKCoE

CySecK

https://cs-coe.iisc.ac.in

CySecK

CySecKCoE


CySecKCoE


CySecK





# CySecK Comic Handbook

# ಸೈಸೆಕ್ ಕಾಮಿಕ್ ಕೈಪಿಡಿ



ಅಮ್ಮಾ , ಇವನು ಮೋಹಿತ್. ನನ್ನ ಬೆಸ್ಟ್ ಫ್ರೆಂಡ್
ಹಾಯ್ ಆಂಟಿ.
ಹಾಯ್ ಮೋಹಿತ್. ನಿಮ್ಮ ಅಮ್ಮ ಎಲ್ಲಿ?
ಓ ಅಲ್ಲಿ ಮೊಬೈಲ್‌ನಲ್ಲಿ ಮಾತಾಡ್ತಾ ಇದ್ದಾಳಲ್ಲ ಅವಳೇ. ಅವಳ ಪಕ್ಕದಲ್ಲಿ ಮೊಬೈಲ್ ನೋಡ್ತಾ ಇರೋರು ನಮ್ಮ ಅಪ್ಪ.
ಇವರು ನಮ್ಮ ಅಪ್ಪ ರೋಹಿತ್.
ಹಾಯ್ ಮೋಹಿತ್.


ಮೋಹಿತ್, ನಿಮ್ಮ ಅಪ್ಪ ಅಮ್ಮನ ಹೆಸರೇನು?
ಅಮ್ಮ ಮಮತಾ. ಅಪ್ಪ ಮನೋಜ್.
ಚೆನ್ನಾಗಿದೆ. ಮಮತಾ ಮನೋಜರ ಮಗ ಮೋಹಿತ. ಮೂರೂ ಮಕಾರ. ಓಕೆ ರಕ್ಷಿತ್, ಗಂಟೆ ಏಳಾಯ್ತು. ಮನೆಗೆ ಹೋಗೋಣ.
ಓಕೆ ಬಾಯ್.
ಮೋಹಿತ್ ಮನೆ. ಅವನ ಅಪ್ಪ ಅಮ್ಮ ಇಬ್ಬರೂ ಮೊಬೈಲ್ ನೋಡುತ್ತಿದ್ದಾರೆ.
ಅಮ್ಮಾ ಬೋರ್ ಆಗ್ತಾ ಇದೆ. ರಕ್ಷಿತ್ ಮನೆಗೆ ಹೋಗಲಾ?
ಬೇಡ. ಈ ಸಮಯದಲ್ಲಿ ಹೋದ್ರೆ ಅವರಿಗೆ ತೊಂದರೆ ಆಗತ್ತೆ. ನೀನೊಬ್ನೆ ಆಡ್ಕೊ.
ಓಕೆ. ಹಾಗಾದ್ರೆ ನಿನ್ನ ಮೊಬೈಲ್ ಕೊಡು. ಅದರಲ್ಲಿ ಆಡ್ಕೋತೀನಿ.
ಆಹಾಹ ಜಾಣ. ನಾನು ಕೊಡಲ್ಲ. ನಿಮ್ಮ ಅಪ್ಪನ್ನ ಕೇಳು.


ಅಪ್ಪಾ, ನಿನ್ನ ಮೊಬೈಲ್ ಕೊಡು.
ಕೊಡೋಲ್ಲ.
ಅಮ್ಮ ಹೇಳಿದ್ದು! ಆದರೂ ಕೊಡಲ್ವಾ?
ಇಲ್ಲ. ಯಾರು ಹೇಳಿದ್ರೂ ಕೊಡಲ್ಲ. ಮೊಬೈಲ್ ಜಾಸ್ತಿ ನೋಡಿದ್ರೆ ಕಣ್ ಹಾಳಾಗುತ್ತೆ.
ಮತ್ತೆ ನೀನು, ಅಮ್ಮ ಯಾವಾಗ್ಲೂ ಮೊಬೈಲ್ ನೋಡ್ತಾ ಇರ್ತೀರಲ್ಲಾ?
ನನ್ನ ಕಣ್ ಹಾಳಾಗಿ ಕನ್ನಡಕ ಬಂದಾಗಿದೆ. ನಿನಗೆ ಈಗಲೇ ಕನ್ನಡಕ ಬರೋದು ಬೇಡ. ಬಾ ಇಬ್ರೂ ಸ್ವಲ್ಪ ಹೊತ್ತು ಮಲಗೋಣ.


ತಂದೆ ಮನೋಜ್ ಮತ್ತು ಮೋಹಿತ್ ಮಲಗುವರು. ಸ್ವಲ್ಪ ಹೊತ್ತಿನಲ್ಲೇ ಮನೋಜ್ ಗೊರಕೆ ಹೊಡೆಯುವನು. ಆದರೆ ಮೋಹಿತ್‌ಗೆ ನಿದ್ದೆ ಬರಲಿಲ್ಲ. ಅವನು ಅಪ್ಪನ ಮೊಬೈಲ್ ತೆಗೆದುಕೊಳ್ಳುವನು.
ಛೇ, ಮೊಬೈಲ್ ಲಾಕ್ ಮಾಡಿದ್ದಾರೆ. ಹಾ, ಒಂದು ಐಡಿಯಾ.
ಅರೆ! ಓಪನ್ ಆಯ್ತು.
ಆಹಾ! ಮಗನ ಕೈಯಲ್ಲಿ ಮೊಬೈಲ್ ಕೊಟ್ಟು ಅಪ್ಪ ಗೊರಕೆ ಹೊಡೀತಿದ್ದಾರೆ.
ಅವರು ಕೊಟ್ಟದ್ದಲ್ಲ. ನಾನೇ ತಗೊಂಡು ಅವರ ಮುಖಕ್ಕೆ ಹಿಡಿದೆ. ಓಪನ್ ಆಯ್ತು.



ಹೌದಾ? ನನ್ನ ಮಗು ತುಂಬಾ ಜಾಣ. ಐ ಲವ್ ಯೂ ಮುದ್ದು.
ನಿಜವಾಗಿಯೂ?
ಹೂಂ.
ಹಾಗಾದ್ರೆ ನಾಡಿದ್ದು ನನ್ನ ಬರ್ತ್‌ಡೇ ಗೆ ಮೊಬೈಲ್ ತೆಗೆಸಿಕೊಡ್ಬೇಕು. ಹೂಂ, ಪ್ರಾಮಿಸ್ ಮಾಡು.
ಓಕೆ. ಪ್ರಾಮಿಸ್!
(ರಕ್ಷಿತ್ ಮನೆ)
ಅಮ್ಮಾ , ನಂಗೇನೋ ಬೇಕು. ಕೊಡಿಸ್ತೀಯಾ?
ಮೊದಲು ಏನು ಅಂತ ಹೇಳು.
ಮೊಬೈಲ್!!!



ಊಹುಂ! ಈ ವಯಸ್ಸಿನಲ್ಲೆ ಮಕ್ಕಳಿಗೆ ಮೊಬೈಲ್ ಕೊಟ್ರೆ ಮಂಗನ ಕೈಲಿ ಮಾಣಿಕ್ಯ ಕೊಟ್ಟ ಹಾಗಾಗುತ್ತೆ. ಅಲ್ವೇನ್ರಿ?
ಹೂಂ. ಹೂಂ.
ಮತ್ತೆ...ಮತ್ತೆ... ಮೋಹಿತ್‌ಗೆ ನನ್ನಷ್ಟೆ ವಯಸ್ಸು. ಅವನಿಗೆ ಮೊಬೈಲ್ ಕೊಡ್ಸಿದ್ದಾರೆ.
ಅವನ ಅಪ್ಪ ಅಮ್ಮನಿಗೆ ಮಗನ ಮೇಲೆ ವಿಪರೀತ ಮೋಹ ಇದೆ. ಏನ್ ಕೇಳಿದ್ರೂ ಅದರ ಪರಿಣಾಮದ ಬಗ್ಗೆ ಯೋಚಿಸದೆ ತಕ್ಷಣ ಕೊಡಿಸ್ತಾರೆ. ಅಲ್ವೇನ್ರಿ?
ಹೂಂ. ಹೂಂ.
ರಕ್ಷಿತ್, ನಾನು ಮೊನ್ನೆ ನಿನಗೆ ಮೊಬೈಲ್ ತುಂಬಾ ನೋಡಿ ಕಣ್ಣು ಹಾಳಾದ, ವ್ಯಾಯಾಮ ಇಲ್ಲದೆ ಬೊಜ್ಜು ರೋಗ ಬಂದ ಮಕ್ಕಳ ಚಿತ್ರ ತೋರ್ಸಿದ್ದು ಮರೆತು ಬಿಟ್ಯಾ?
ಹೂಂ. ನೆನಪಿದೆ. ನೆನಸಿಕೊಂಡ್ರೆ ಭಯ ಆಗುತ್ತೆ.


ಅದಕ್ಕೆ ನಿನಗೆ ಈಗ ಮೊಬೈಲ್ ಬೇಡ. ತೀರಾ ಬೇಜಾರಾದಾಗ ನನ್ನ ಮೊಬೈಲೇ ಕೊಡ್ತೀನಿ. ಸರೀನಾ?
ಓಕೆ ಅಮ್ಮ. ಮೊಬೈಲ್ ಬಂದಾಗಿನಿಂದ ಆ ಮೋಹಿತ್ ತುಂಬಾ ಬದಲಾಗಿದ್ದಾನೆ. ಅವನ ಮೊಬೈಲ್ ಹೇಗಿದೆ ಅಂತ ನೋಡೋಕೂ ನನಗೆ ಕೊಡಲಿಲ್ಲ. ತುಂಬಾ ಜಂಬ ಮಾಡ್ತಾನೆ.
ಪಾಪ! ನೀನು ಮೊಬೈಲ್ ಹಾಳು ಮಾಡಿದರೆ ಅಂತ ಅವನಿಗೆ ಭಯ.
ಮೂರು ದಿನದಿಂದ ನಮ್ಮ ಜೊತೆ ಆಡೋಕೂ ಬರ್ತಾ ಇಲ್ಲಾ.
ಹುಷಾರಿಲ್ವೊ ಏನೋ. ಇರು ಅವನ ಅಮ್ಮನ ಹತ್ರ ಕೇಳ್ತೀನಿ.
ಹಲೋ, ಮೋಹಿತ್‌ಗೆ ಏನಾಗಿದೆ? ಇತ್ತೀಚೆಗೆ ಆಡೋಕೆ ಬರ್ತಿಲ್ವಂತೆ?
ಚೆನ್ನಾಗಿದ್ದಾನೆ. ಸ್ಕೂಲಿಂದ ಬಂದ ಮೇಲೆ ಎಂದಿನ ಹಾಗೆ ರಕ್ಷಿತ್ ಜೊತೆ ಆಡೋಕೆ ಹೋಗ್ತೀನಿ ಅಂತ ಹೋಗಿದ್ದ. ಏನು? ಬಂದಿಲ್ವಾ? ಮನೆಗೆ ಬಂದ ಮೇಲೆ ವಿಚಾರಿಸ್ತೀನಿ. ವಿಷಯ ತಿಳಿಸಿದ್ದಕ್ಕೆ ಥ್ಯಾಂಕ್ಸ್.





ಮೋಹಿತ್, ಇಷ್ಟು ಹೊತ್ತು ಎಲ್ ಹೋಗಿದ್ದೆ?
ರಕ್ಷಿತ್ ಜೊತೆ ಆಡೋಕೆ.
ಸುಳ್ಳು ಹೇಳಬೇಡ. ನೀನು ಮೂರು ದಿನದಿಂದ ರಕ್ಷಿತ್ ಜೊತೆ ಆಡೋಕೆ ಬರ್ತಾ ಇಲ್ಲಾ ಅಂತ ಅವನ ಅಮ್ಮ ನನಗೆ ಹೇಳಿದರು. ಮೂರು ದಿನದಿಂದ ಏನ್ ಮಾಡ್ತಾ ಇದ್ದೆ, ಎಲ್ಲಿಗೆ ಹೋಗ್ತಾ ಇದ್ದೆ ಅಂತ ಸತ್ಯ ಹೇಳು. ಇಲ್ಲದಿದ್ರೆ ನಿಮ್ಮ ಅಪ್ಪನಿಗೆ ಹೇಳಿ ಚೆನ್ನಾಗಿ...
ಸಾರಿ ಅಮ್ಮ. ಆ ಹುಡುಗರೆಲ್ಲ ನನ್ನ ಮೊಬೈಲ್ ಕಿತ್ಕೊಂಡು ಹಾಳ್ ಮಾಡ್ತಾರೆ ಅಂತ ನಾನೊಬ್ಬನೆ ಒಂದು ಗುಟ್ಟಾದ ಜಾಗದಲ್ಲಿ ಕೂತು ಮೊಬೈಲ್‌ನಲ್ಲಿ ಆಟ ಆಡ್ತಾ ಇದ್ದೆ. ಮೊಬೈಲ್ ಸಕತ್ತಾಗಿದೆ ಅಮ್ಮ. ಅದನ್ನು ನೋಡ್ತಾ ಇದ್ರೆ, ಅದರಲ್ಲಿ ಆಡ್ತಾ ಇದ್ರೆ ಬೇರೇನೂ ಬೇಡ ಅನ್ಸತ್ತೆ.
ಓಹೋ ಹೀಗೋ ಸಮಾಚಾರ? ಅದಕ್ಕೆ ಮೂರು ದಿನದಿಂದ ನಿನ್ನ ಹಸಿವೆ ಕಡಿಮೆಯಾಗಿದೆ. ಕಣ್ಣು ಕೆಂಪಾಗಿದೆ. ರಾತ್ರಿ ಸರಿಯಾಗಿ ನಿದ್ರೆನೂ ಮಾಡ್ತಾ ಇಲ್ಲ. ನಿನಗೆ ಇನ್ನು ಮೊಬೈಲ್ ಕೊಡಬಾರದು. ಅದನ್ನು ಎಲ್ಲಾದರೂ ಬಚ್ಚಿಡ್ತೀನಿ.



ಅಯ್ಯೋ ಅಮ್ಮಾ , ಹಾಗೆ ಮಾಡಬೇಡ. ಮೊಬೈಲ್ ನಲ್ಲಿ ತುಂಬ ಒಳ್ಳೆ ವಿಷಯಗಳು ಬರುತ್ತವೆ. ಶಾಲೆ ಪುಸ್ತಕದಲ್ಲಿ ಇಲ್ಲದೆ ಇರುವ ಅನೇಕ ವಿಚಾರಗಳು ಅದರಲ್ಲಿ ಸಿಗುತ್ತವೆ. ಅಮ್ಮಾ , ನಿಂಗೊತ್ತಾ? ನಮ್ಮ ರಾಷ್ಟ್ರಗೀತೆ ಜನಗಣಮನವನ್ನು ವಿಶ್ವದಲ್ಲೇ ಅತ್ಯುತ್ತಮ ಗೀತೆ ಅಂತ ವಿಶ್ವಸಂಸ್ಥೆ ಆಯ್ಕೆ ಮಾಡಿದೆಯಂತೆ. ಇದನ್ನು ಮೂರು ಜನ ನನಗೆ ಫಾರ್ವರ್ಡ್ ಮಾಡಿದ್ದರು.
ನನಗೂ ಅದು ಬಂದಿತ್ತು ಕಣೊ. ಆದರೆ ಅದು ಸುಳ್ಳು ಸುದ್ದಿ ಅಂತ ಆಮೇಲೆ ಗೊತ್ತಾಯ್ತು. ಯಾರೋ ಕಿಡಿಗೇಡಿಗಳು ಜಾಲತಾಣದಲ್ಲಿ ಇಂಥ ಫೇಕ್ ನ್ಯೂಸ್ ತೇಲಿಬಿಡುತ್ತಾರೆ. ಕೆಲವೊಮ್ಮೆ ಅವುಗಳಿಂದ ಸಮಾಜದ ಶಾಂತಿ ಸೌಹಾರ್ದಕ್ಕೆ ಹಾನಿಯಾಗುತ್ತೆ.
ಅಂದರೆ ಇಂಟರ್‌ನೆಟ್ಟಲ್ಲಿ ಬರೋದೆಲ್ಲಾ ನಿಜ ಅಲ್ವಾ?
ಎಲ್ಲವೂ ನಿಜ ಆಗಿರೋದಿಲ್ಲ. ಸುಳ್ಳು ಸಂಗತಿಗಳೂ ಸಾಕಷ್ಟು ಬರುತ್ತವೆ. ಸುದ್ದಿ ಇಲ್ಲವೇ ಚಿತ್ರಗಳನ್ನು ಹಂಚಿಕೊಳ್ಳುವ ಮೊದಲು ಅದು ಸತ್ಯವೋ ಸುಳ್ಳೋ ಅಂತ ಪರೀಕ್ಷಿಸಬೇಕು.
ಆಯ್ತಮ್ಮ. ಇನ್ಮೇಲೆ ತುಂಬಾ ಹೊತ್ತು ಮೊಬೈಲ್ ನೋಡೋಲ್ಲ. ನೀನು ಸಾಕು ಅಂದ ಕೂಡಲೇ ನಿಲ್ಲಿಸ್ತೀನಿ. ಸರೀನಾ?
ಸರಿ. ಹಾಗೇ ಮಾಡು. ನೀನು ಜಾಣ ಮರಿ!


(ಕೆಲವು ದಿನಗಳ ಬಳಿಕ ಮಮತಾ ಮತ್ತು ಮನೋಜ್ ಮೋಹಿತ್‌ನನ್ನು ವೈದ್ಯರಲ್ಲಿಗೆ ಕರೆದುಕೊಂಡು ಬರುವರು)
ನಿಮ್ಮ ಮಗನ ಮೆಡಿಕಲ್ ರಿಪೋರ್ಟ್‌ಗಳೆಲ್ಲ ನಾರ್ಮಲ್ ಇವೆ.
ಆದರೂ ಸ್ಕೂಲಿಗೆ ಹೊರಟ ಕೂಡ್ಲೆ ಹೊಟ್ಟೆ ನೋವು ಯಾಕೆ ಬರುತ್ತೆ?
ಕೆಲವು ರೋಗಗಳಿಗೆ ದೈಹಿಕ ಮಾತ್ರವಲ್ಲ, ಮಾನಸಿಕ ಕಾರಣಗಳೂ ಇರುತ್ತವೆ. ನನ್ನ ಸ್ನೇಹಿತರೊಬ್ಬರು ಒಳ್ಳೆಯ ಮಕ್ಕಳ ಮನೋವೈದ್ಯರು. ಕೌನ್ಸೆಲಿಂಗ್ ಮಾಡ್ತಾರೆ. ನಿಮ್ಮ ಮಗನನ್ನು ಅವರಿಗೊಮ್ಮೆ ತೋರಿಸಿ.
ಅಯ್ಯೋ! ನನ್ನ ಮಗನನ್ನು ಮನೋವೈದ್ಯರಿಗೆ ತೋರಿಸ್ಬೇಕಾ?
ಹೌದು. ಈ ಬಗ್ಗೆ ಹಿಂಜರಿಕೆ ಬೇಡ. ಮನೋವೈದ್ಯರ ಹತ್ತಿರ ಹೋದ ತಕ್ಷಣ ತಲೆ ಸರಿ ಇಲ್ಲ ಅಂತ ತಿಳಿದುಕೋಬಾರದು.



(ಮನೋವೈದ್ಯರ ಬಳಿ ಮಮತಾ, ಮನೋಜ್ )
ನಿಮ್ಮ ಮಗನ ಹತ್ರ ಮಾತಾಡಿದೆ. ಪರೀಕ್ಷೆ ಮಾಡಿದೆ. ಅವನ ಹೊಟ್ಟೆ ನೋವಿಗೆ ಕಾರಣ ನೀವು ಅವನಿಗೆ ಕೊಡಿಸಿದ ಮೊಬೈಲ್.
ಮೊಬೈಲಾ? ಅದು ಹೇಗೆ?
ಬಹಳ ಸರಳ. ಶಾಲೆಗೆ ಮೊಬೈಲ್ ತೆಗೆದುಕೊಂಡು ಹೋಗುವಂತಿಲ್ಲ. ಆಗಾಗ ಹೊಟ್ಟೆ ನೋವು ಅಂತ ಮನೇಲೇ ಇದ್ರೆ ಸ್ವಲ್ಪ ಹೊತ್ತು ಮಲಗಿ ಆಮೇಲೆ ಮೊಬೈಲ್ ನೋಡಬಹುದಲ್ಲ. ಅದಕ್ಕೆ ಅವನಿಗೆ ಹೊಟ್ಟೆ ನೋವು ಬರೋದು.
ಅಂದ್ರೆ ನಮ್ಮ ಮಗ ಮೋಹಿತನ ಹೊಟ್ಟೆ ನೋವು ಸುಳ್ಳಾ?
ಹೊಟ್ಟೆ ನೋವು ಸುಳ್ಳಲ್ಲ. ಆದರೆ ಅದಕ್ಕೆ ಕಾರಣ ಮಾನಸಿಕ. ನಿಮ್ಮ ಮಗ ಮೋಹಿತ ವಿಪರೀತ ಮೊಬೈಲ್ ಮೋಹಕ್ಕೆ ಒಳಗಾಗಿದ್ದಾನೆ. ಇದು ಒಂದು ರೀತಿಯ ಅಪಾಯಕಾರಿ ಚಟ. ಇದನ್ನು Digital Addiction ಅಂತಾರೆ. ಮೊಬೈಲ್, ಟ್ಯಾಬ್, ಲ್ಯಾಪ್‌ಟಾಪ್ ಇವುಗಳನ್ನು ಮಿತಿ ಮೀರಿ ನೋಡಿದರೆ ಹೀಗಾಗುತ್ತೆ. ಅಂಥವರಿಗೆ ಬೇರಾವುದರಲ್ಲೂ ಆಸಕ್ತಿ ಇರೋದಿಲ್ಲ. ಏಕಾಗ್ರತೆ ಇರೋದಿಲ್ಲ. ಕ್ರಮೇಣ ಅಂಥವರು ಖಿನ್ನತೆಗೆ ಜಾರುತ್ತಾರೆ. ಅದು ಅಪಾಯಕಾರಿ.
ನಾನು ಬೇಡ ಅಂದರೂ ಕೇಳದೆ ಇವಳು ಮೊಬೈಲ್ ಕೊಡಿಸಿದಳು. ಮೊಬೈಲ್ ಬಂದಾಗಿನಿಂದ ಮೋಹಿತ್ ಕಲಿಕೆಯಲ್ಲಿ ಹಿಂದೆ ಬಿದ್ದಿದ್ದಾನೆ. ನೀನು ಅತಿಯಾಗಿ ಮುದ್ದು ಮಾಡಿದ್ರಿಂದ ಹೀಗಾಗಿರೋದು.



ಅವನು ಹೀಗಾಗಿರೋದಕ್ಕೆ ಕಾರಣ ನೀವು. ಮಗ ಏನು ಮಾಡ್ತಿದ್ದಾನೆ ಅಂತ ನೋಡುವಷ್ಟು ವ್ಯವಧಾನ ನಿಮಗೆಲ್ಲಿದೆ?
ನೀನೂ ಇಡೀ ದಿನ ಮೊಬೈಲ್‌ನಲ್ಲೇ ಮುಳುಗಿರ್ತೀ. ಅದಕ್ಕೆ ಅವನು ಹಾಳಾಗಿರೋದು.
ಸಾಕು, ಸಾಕು. ಯಾರು ಕಾರಣ ಅಂತ ನೀವು ಮನೆಗೆ ಹೋಗಿ ಚರ್ಚೆ ಮಾಡಿ. ಹೊರಗೆ ಬೇರೆಯವರು ಕಾಯ್ತಿದ್ದಾರೆ. ನಾಳೆ ನಿಮ್ಮ ಮಗನನ್ನು ಪುನಃ ಕರೆದುಕೊಂಡು ಬನ್ನಿ. ನಾನು ಅವನ ಹತ್ರ ಇನ್ನಷ್ಟು ಮಾತಾಡ್ತೀನಿ.
ರೀ, ನಾವು ರಕ್ಷಿತ್ ಬರ್ತ್‌ಡೇಗೆ ಈ ಸಲ ಮೊಬೈಲ್ ಗಿಫ್ಟ್ ಕೊಡ್ತೀವಿ ಅಂದಿದ್ದೆವು. ಈಗ ನೋಡಿದ್ರೆ ಬೇಡ ಅನ್ಸುತ್ತೆ.
ಯಾಕೆ? ಏನಾಯ್ತು?
ಮೋಹಿತ್ ಕತೆ ಗೊತ್ತಿಲ್ವಾ? ಸ್ಕೂಲಿಗೆ ಸರಿಯಾಗಿ ಹೋಗೋದಿಲ್ವಂತೆ. ಸ್ಕೂಲಿಗೆ ಹೋಗೋ ಸಮಯದಲ್ಲಿ ಹೊಟ್ಟೆ ನೋವು ಅಂತ ಮಲಗ್ತಾನಂತೆ. ಆಮೇಲೆ ಇಡೀ ದಿನ ಮೊಬೈಲ್ ನೋಡ್ತಾ ಬಿದ್ದಿರ್ತಾನಂತೆ. ಅವನ ಮೊಬೈಲ್ ಚಟ ಬಿಡಿಸೋಕೆ Counselling ಗೆ ಹಾಕಿದ್ದಾರಂತೆ.
ಆದರೆ ರಕ್ಷಿತ್‌ನ ಎಲ್ಲಾ ಗೆಳೆಯರ ಹತ್ರಾನೂ ಮೊಬೈಲ್ ಇದೆ. ನಾವೂ ಕೊಡಿಸ್ತೀವಿ ಅಂತ ಪ್ರಾಮಿಸ್ ಮಾಡಿದ್ವಿ. ಈಗ ಇಲ್ಲ ಅಂದ್ರೆ ಅವನಿಗೆ ಬೇಜಾರಾಗುತ್ತೆ.



ಬೇಜಾರಾದರೆ ಆಗಲಿ. ನನಗೆ ಅವನ ಭವಿಷ್ಯ ಮುಖ್ಯ.
ಒಂದು ಕೆಲ್ಸ ಮಾಡೋಣ. ಮೊಬೈಲ್ ಕೊಡೋವಾಗ ಅದನ್ನು ಎಷ್ಟು ಬಳಸಬೇಕು, ಅದರಲ್ಲಿರುವ ಅಪಾಯಗಳೇನು, ಸುರಕ್ಷಿತವಾಗಿ ಬಳಸೋದು ಹೇಗೆ ಅಂತ ಅವನಿಗೆ ತಿಳುವಳಿಕೆ ಕೊಡೋಣ.
ಅವನು ಅದನ್ನು ನಿರ್ಲಕ್ಷ್ಯ ಮಾಡಿದರೆ?
ನಾವು ಅವನ ಜೊತೆ ಕೂತು ಅವನು ಏನು ನೋಡ್ತಾ ಇದ್ದಾನೆ ಅನ್ನೋದನ್ನು ಗಮನಿಸಬೇಕು. ಆನ್‌ಲೈನಲ್ಲಿ ಬಂದದ್ದನ್ನೆಲ್ಲಾ ನಂಬಿದರೆ ಹೇಗೆ ಮೋಸ ಮಾಡ್ತಾರೆ ಅಂತ ಅವನಿಗೆ ಹೇಳಬೇಕು.
ಹೌದ್ರೀ. ಮೊನ್ನೆ ನಮ್ಮ ಸಂಬಂಧಿಕರ ಮಗಳು ಮೊಬೈಲ್‌ನಲ್ಲಿ ಅದೇನೋ ಆಟ ಆಡ್ತಾ ಮನೆ ಬಿಟ್ಟು ಹೊರಟೋಗಿದ್ದಳು. ಎರಡು ದಿನದ ನಂತರ ಪೋಲೀಸರ ಸಹಾಯದಿಂದ ಸಿಕ್ಕಿದಳು.
ಮಕ್ಕಳು ಮೊಬೈಲ್ ನೋಡ್ತಾ ನೋಡ್ತಾ ಸಿಕ್ಕ ಸಿಕ್ಕ ಲಿಂಕ್ ಕ್ಲಿಕ್ ಮಾಡ್ತಾ ಹೋಗಿ ಅಪಾಯಕ್ಕೆ ಈಡಾಗ್ತಾರೆ. ಮಕ್ಕಳು ಸುರಕ್ಷಿತ ವೆಬ್‌ಸೈಟ್, ಆಪ್‌ಗಳನ್ನು ಮಾತ್ರ ಬಳಸ್ತಾ ಇದ್ದಾರಾ ಅಂತ ಆಗಾಗ ಪೋಷಕರು ಪರೀಕ್ಷಿಸಬೇಕು.
ಪತ್ರಿಕೆಯಲ್ಲಿ ಬರ್ತಿರೋ ಸೈಬರ್ ಅಪರಾಧಗಳ ವರದಿಗಳನ್ನು ಓದಿದರೆ ಈ ಡಿಜಿಟಲ್ ಲೋಕದ ಸಹವಾಸವೇ ಬೇಡ ಅನ್ಸತ್ತೆ. ಅದರಲ್ಲೂ ಸಾಮಾಜಿಕ ಜಾಲತಾಣಗಳಲ್ಲಿ ಮಕ್ಕಳನ್ನು ನಿರಂತರವಾಗಿ ಹಿಂಬಾಲಿಸುವುದು, ಕೆಟ್ಟದಾಗಿ ಕಮೆಂಟ್ ಮಾಡಿ ಅವಹೇಳನ ಮಾಡುವುದು, ಬೆದರಿಕೆ ಹಾಕೋದು ಹೆಚ್ಚಾಗ್ತಾ ಇದೆ. ನಮ್ಮ ರಕ್ಷಿತ್‌ನನ್ನು ಇವುಗಳಿಂದ ಕಾಪಾಡಬೇಕು.



ಹೌದು. ಮಕ್ಕಳು ಮೊಬೈಲ್‌ನಲ್ಲಿ ಆಡೋವಾಗ ಅಪರಿಚಿತ ವ್ಯಕ್ತಿಗಳ ಜೊತೆ ಸಂಪರ್ಕ ಮಾಡದಂತೆ ನಾವು ನಿಗಾ ವಹಿಸಬೇಕು. ಎರಡು ಅಂಶಗಳ ದೃಢೀಕರಣ, ವೈಯಕ್ತಿಕ ಮಾಹಿತಿಗಳ ರಕ್ಷಣೆ, ಮೋಸದ ಇಮೇಲ್, ವಿಡಿಯೊ ಚಾಟ್‌ಗಳ ಬಗ್ಗೆ ಎಚ್ಚರದಿಂದಿರುವುದು ಎಲ್ಲವನ್ನೂ ಮೊದಲೇ ರಕ್ಷಿತ್‌ಗೆ ತಿಳಿಸಬೇಕು.
ಏನೂ ತಿಳಿಸೋದು ಬೇಡ. ಎಲ್ಲವನ್ನೂ ನಾನು ಕೇಳಿಸಿಕೊಂಡೆ.
ಅರೆ! ನೀನು ಯಾವಾಗ ಇಲ್ಲಿಗೆ ಬಂದೆ. ಗೊತ್ತೇ ಆಗ್ಲಿಲ್ಲ.
ನನ್ನ ರಕ್ಷಿತ್ ಭಲೇ ಜಾಣ.
ಬೇರೆಲ್ಲಾ ಅರ್ಥ ಆಯ್ತು. ಆದರೆ ಎರಡು ಅಂಶಗಳ ದೃಢೀಕರಣ ಅಂದರೇನು?
ಅದಕ್ಕೆ 2 Factor Authentication ಅಂತಾರೆ. ಮನೆಗೆ ಒಂದು ಬೀಗ ಹಾಕೋದಕ್ಕಿಂತ ಎರಡು ಬೀಗ ಹಾಕಿದರೆ ಹೆಚ್ಚು ಸುರಕ್ಷಿತ ಅಲ್ವಾ? ಇದೂ ಹಾಗೇನೇ. ಇದು ಜಾಲತಾಣಗಳಲ್ಲಿ ನಮ್ಮ ಗುರುತು ಕಾಪಾಡಿಕೊಳ್ಳೋದಕ್ಕೆ ಇರುವ ಸುಲಭ ಮಾರ್ಗ. ಇದು ಫೇಸ್ಬುಕ್, ಇನ್‌ಸ್ಟಾಗ್ರಾಮ್, ವಾಟ್ಸಾಪ್, ಜಿಮೇಲ್, ಡಿಸ್ಕೊರ್ಡ್ ಮುಂತಾದ ಎಲ್ಲಾ ಆಪ್‌ಗಳಲ್ಲೂ ಇರುತ್ತೆ.



ಅರೆ! ಇದು ನನಗೂ ಗೊತ್ತಿರಲಿಲ್ಲ. ಎರಡು ಅಂಶಗಳ ದೃಢೀಕರಣ ಮಾಡೋದು ಹ್ಯಾಗೆ?
ಬಹಳ ಸರಳ. ಬರೀ ಪಾಸ್‌ವರ್ಡ್ ಬಳಸಿದರೆ ಅದು ಒಂದೇ ಅಂಶ. ಅದರ ಜೊತೆಗೆ ಓಟಿಪಿ, ಫೇಸ್, ತಂಬ್ ಸೇರಿಸಿಕೊಂಡರೆ ಎರಡು ಅಂಶಗಳ ದೃಢೀಕರಣ ಆಗುತ್ತೆ. ಇಲ್ನೋಡು ನನ್ನ ವಾಟ್ಸಾಪ್ ತೆರೆಯಬೇಕಾದರೆ ಲಾಗಿನ್ ಪಾಸ್‌ವರ್ಡ್ ಹಾಕಿದರೆ ಸಾಲದು, ಆಮೇಲೆ ಒಂದು ಪಿನ್ ಕೂಡಾ ಹಾಕ್ಬೇಕು.
ನಿಮ್ಮ ಪಿನ್ ಏನು?
ಅದನ್ನು ಯಾರಿಗೂ ಹೇಳಬಾರದು.
ಓಹೋ ನಮ್ಮ ಯಜಮಾನರು ವಾಟ್ಸಾಪ್‌ಗೆ ಎರಡು ಅಂಶಗಳ ದೃಢೀಕರಣ ಮಾಡಿದ್ದಾರೆ ಅಂದಮೇಲೆ ಭಾರೀ ಗುಟ್ಟುಗಳೇ ಇರಬಹುದು!
ಹಿ...ಹಿ... ಹಾಗೇನೂ ಇಲ್ಲ. ನೀನು ಸುಮ್ ಸುಮ್ನೆ ಅನುಮಾನ ಪಡಬೇಡ.
ಅಪ್ಪಾ, ನೀವು ಹೇಳಿದ ಎಲ್ಲಾ ಎಚ್ಚರಿಕೆ ಪಾಲಿಸಿದರೆ ಮೊಬೈಲ್ ಕೊಡಿಸ್ತೀರಲ್ವಾ?
ಪ್ರಾಮಿಸ್.
ಖಂಡಿತಾ. ಪ್ರಾಮಿಸ್.



(ಮನೋವೈದ್ಯರ ಬಳಿ Counselling ಗೆ ಬಂದ ಮೋಹಿತ್)
ಮೋಹಿತ್, ನಿನಗ್ಯಾಕೆ ಮೊಬೈಲ್ ಮೇಲೆ ಅಷ್ಟೊಂದು ಮೋಹ?
ಮನೆಯಲ್ಲಿ ಅಪ್ಪ ಅಮ್ಮ ಇಬ್ಬರೂ ಕೆಲಸದಲ್ಲಿ ಮುಳುಗಿರ್ತಾರೆ. ನನಗೆ ಬೋರ್ ಆಗುತ್ತೆ. ಮೊಬೈಲ್‌ನಲ್ಲಿ ಚಾಟ್ ಮಾಡೋಕೆ, ಆಟ ಆಡೋಕೆ ತುಂಬಾ ಸ್ನೇಹಿತರು ಸಿಗ್ತಾರೆ. ಮಜಾ ಅನ್ಸತ್ತೆ.
ಮೋಹಿತ್, ಒಂದು ವಿಷಯ ಗೊತ್ತಾ? ಆನ್ ಲೈನ್‌ನಲ್ಲಿ ಕಾಣುವ ವ್ಯಕ್ತಿಗಳ ವಿವರವನ್ನು ನಿಜ ಅಂತ ಕಣ್ಣು ಮುಚ್ಚಿಕೊಂಡು ನಂಬಬಾರದು. ಅಲ್ಲಿ ಯಾರು ಯಾವ ಹೆಸರಿನಲ್ಲಿ ಬೇಕಾದ್ರೂ ಖಾತೆ ತೆಗೆದು ಸುಳ್ಳು ವಿವರಗಳನ್ನು ನಮೂದಿಸಬಹುದು. ಗಂಡು ಹೆಣ್ಣಿನ ಹೆಸರಿನಲ್ಲಿ, ಹೆಣ್ಣು ಗಂಡಿನ ಹೆಸರಲ್ಲಿ ಖಾತೆಗಳನ್ನು ತೆರೆಯಬಹುದು. ಇಂಥ ನಕಲಿ ಖಾತೆಯ ಸೈಬರ್ ವಂಚಕರು ನಿನ್ನಂಥ ಮುಗ್ಧ ಮಕ್ಕಳಿಗೆ ಮೋಸ ಮಾಡೋಕೆ ಕಾಯ್ತಾ ಇರ್ತಾರೆ. ಮೊದಲು ನಿನ್ನನ್ನು ಹೊಗಳಿ ಬುಟ್ಟಿಗೆ ಹಾಕ್ಕೋತಾರೆ. ಬಹುಮಾನಗಳ ಆಸೆ ತೋರಿಸ್ತಾರೆ. ಆಮೇಲೆ ನಿನ್ನಿಂದ ನಿನ್ನ ಹೆಸರು, ಫೋನ್ ನಂಬರ್, ವಯಸ್ಸು, ಶಾಲೆಯ ಹೆಸರು, ವಿಳಾಸ, ಪೋಷಕರ ವಿವರ ಮುಂತಾದ ಖಾಸಗಿ ಮಾಹಿತಿಗಳನ್ನು, ಫೋಟೋಗಳನ್ನು ತಗೋತಾರೆ.
ತಗೊಳ್ಳಿ ಬಿಡಿ ಅಂಕಲ್. ನಾನು ಸ್ಟೇಟಸ್ ಹಾಕೋದು, ರೀಲ್ಸ್ ಮಾಡೋದು ಎಲ್ರೂ ನೋಡಲಿ, ನಾನ್ ಫೇಮಸ್ ಆಗಲಿ ಅಂತಲೇ ಅಲ್ವಾ?
ನಿಜ. ಆದರೆ ಸೈಬರ್ ಭದ್ರತೆಗೆ ಗಮನ ಕೊಡದಿದ್ರೆ ನಿನ್ನ ಮಾಹಿತಿ ಸೈಬರ್ ಅಪರಾಧಿಗಳ ಕೈಸೇರಿ ಅವರು ಅದನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ. ಮಾಹಿತಿಯನ್ನು ದುಷ್ಕರ್ಮಿಗಳಿಗೆ ಮಾರಿದರೆ ಅದರಿಂದ ಅಪಾಯ ಆಗಬಹುದು. ನಿನ್ನ ಮುಖಕ್ಕೆ ಈ ಥರ ಇನ್ನಾರದೊ ಬೆತ್ತಲೆ ದೇಹ ಅಂಟಿಸಿದರೆ, ಅದನ್ನು ನಿನ್ನ ಎಲ್ಲಾ ಗೆಳೆಯರಿಗೆ, ಸಂಬಂಧಿಕರಿಗೆ ಕಳುಹಿಸಿದರೆ ಓಕೆನಾ?
ಅಯ್ಯೋ, ಥೂ! ಅಸಹ್ಯ.. ಬೇಡ ಅಂಕಲ್.


ವಂಚಕರು ತಮ್ಮ ಇಮೇಲ್ ಐಡಿ, ಪ್ರಸಿದ್ಧ ಸಂಸ್ಥೆಗಳದ್ದು ಅನ್ನಿಸುವ ಹಾಗೆ ನಕಲು ಮಾಡಿರ್ತಾರೆ. ವೆಬ್‌ಸೈಟುಗಳೂ ನಕಲಿಯಾಗಿರುತ್ತವೆ. ಆದ್ದರಿಂದ ಮೊಬೈಲ್‌ನಲ್ಲಿ ಬಂದ ಲಿಂಕ್ ಒತ್ತುವ ಮೊದಲು ಅದು ಸುರಕ್ಷಿತವೇ ಅಂತ ಯೋಚಿಸಬೇಕು. ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು. ನಿನ್ನ ವಯಸ್ಸಿನ ಅನೇಕ ಮಕ್ಕಳು ಆನ್‌ಲೈನಲ್ಲಿ ಬರೋದೆಲ್ಲಾ ನಿಜ ಅಂತ ನಂಬಿ ಸೈಬರ್ ಮೋಸಕ್ಕೆ ಒಳಗಾಗುತ್ತಿದ್ದಾರೆ. ಅದನ್ನು ಹೆತ್ತವರಿಗೆ, ಮಿತ್ರರಿಗೆ ಹೇಳಲಾಗದೆ ಒದ್ದಾಡ್ತಾ ಇದ್ದಾರೆ. ಕೆಲವರು ಮನೋರೋಗಿಗಳಾಗಿದ್ರೆ ಇನ್ನು ಕೆಲವರು ಆತ್ಮಹತ್ಯೆ ಮಾಡ್ಕೊಂಡಿದ್ದಾರೆ. ಗೊತ್ತಾ?
ಅಂದ್ರೆ ನನಗೂ ಹಾಗೆಲ್ಲಾ ಮಾಡ್ತಾರಾ?
ಮಾಡಬಹುದು. ಯಾಕಂದ್ರೆ ಮಕ್ಕಳನ್ನು ಬಳಸಿಕೊಂಡು ಮಾಡುವ ಅಪರಾಧಗಳ ಸಂಖ್ಯೆ ಹೆಚ್ಚಾಗ್ತಾ ಇದೆ. ಎಲ್ಲಿ, ನಿನ್ನ ಮೊಬೈಲ್ ಸ್ವಲ್ಪ ಕೊಡು. ಲಾಕ್ ಆಗಿದೆ. ಇದರ ಪಾಸ್ ವರ್ಡ್ ಏನು?
123456
ಇದು ಯಾರು ಬೇಕಾದರೂ ಊಹಿಸಬಹುದಾದ ದುರ್ಬಲ ಪಾಸ್‌ವರ್ಡ್. ಪಾಸ್‌ವರ್ಡ್ ಯಾರೂ ಊಹಿಸಲಾಗದಷ್ಟು ಗಟ್ಟಿಯಾಗಿರಬೇಕು. ಪಾಸ್ ವರ್ಡ್, ಓಟಿಪಿ ಯಾರ ಜೊತೆಗೂ ಹಂಚಿಕೋಬಾರದು. ಆಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಮೊದಲು ಅದು ನಂಬಿಕೆಗೆ ಅರ್ಹವೇ ಅಂತ ಚೆಕ್ ಮಾಡ್ಬೇಕು.


ಅದು ಹೇಗೆ ಗೊತ್ತಾಗುತ್ತೆ?
ಪ್ಲೇ ಸ್ಟೋರ್, ಆಪ್ ಸ್ಟೋರ್‌ನಲ್ಲಿ ಇರುವ ಆಪ್‌ಗಳು ಹೆಚ್ಚು ವಿಶ್ವಾಸಾರ್ಹ. ಅವುಗಳನ್ನು ಎಷ್ಟು ಜನ ಡೌನ್‌ಲೋಡ್ ಮಾಡಿಕೊಂಡಿದ್ದಾರೆ ಅಂತ ನೋಡಬೇಕು. ಹೆಚ್ಚು ಜನ ಡೌನ್ ಲೋಡ್ ಮಾಡಿಕೊಂಡಿರುವ, ರಿವ್ಯೂನಲ್ಲಿ ಒಳ್ಳೆಯ ಅಭಿಪ್ರಾಯ ಪಡೆದಿರುವ ಆಪ್‌ಗಳನ್ನು ಮಾತ್ರ ಡೌನ್ ಲೋಡ್ ಮಾಡ್ಕೋಬೇಕು. ಡೌನ್‌ಲೋಡ್ ಮಾಡುವಾಗ ನಿಮ್ಮ ಫೋಟೋ ಗ್ಯಾಲರಿ, ಮೈಕ್ರೋಫೋನ್, ಕಾಂಟ್ಯಾಕ್ಟ್ಸ ಮುಂತಾದವುಗಳಿಗೆ ಸಂಪರ್ಕ ನೀಡಬೇಕಾಗುವುದರಿಂದ ಮಕ್ಕಳು ಯಾವಾಗಲೂ ಹಿರಿಯರ ಉಸ್ತುವಾರಿಯಲ್ಲೆ ಆಪ್ ಡೌನ್‌ಲೋಡ್ ಮಾಡಿಕೊಳ್ಳುವುದು ಉತ್ತಮ. ಅಪರಿಚಿತರ ಜೊತೆ ಸ್ನೇಹ ಬೆಳೆಸುವ ಮೊದಲು ನಿನ್ನ ಅಪ್ಪ ಅಥವಾ ಅಮ್ಮನ ಬಳಿ ಕೇಳಬೇಕು. ಅಗತ್ಯವಿದ್ದರೆ ಮಾತ್ರ ಅಪರಿಚಿತರ friend request ಸ್ವೀಕರಿಸಬೇಕು.
ಅಂಕಲ್, ಮೊನ್ನೆ ನಾನು ಒಂದು ಆನ್‌ಲೈನ್ ಗೇಮಲ್ಲಿ ಗೆದ್ದಾಗ ಯಾರೋ ನನಗೆ ಫೋನ್ ಮಾಡಿ “ನೀನು ತುಂಬಾ ಚೆನ್ನಾಗಿ ಆಡಿದ್ದೀಯ. ಫ್ರೀಡಂ ಪಾರ್ಕಿಗೆ ಒಬ್ಬನೇ ಬಾ. ನಿನಗೆ ಬಹುಮಾನ ಕೊಡ್ತೀನಿ” ಅಂದ್ರು. ನನಗೆ ಒಬ್ಬನೇ ಹೋಗಲಿಕ್ಕೆ ಭಯ ಆಯ್ತು. ಹೋಗ್ಲಿಲ್ಲ.
ಒಳ್ಳೇದಾಯ್ತು. ಹೋಗಿದ್ರೆ ಅವರು ನಿನ್ನನ್ನು ಕಿಡ್ನಾಪ್ ಮಾಡ್ಬಹುದಿತ್ತು .ಬ್ಲ್ಯಾಕ್ ಮೇಲ್ ಮಾಡ್ತಾ ಇದ್ರು. ಯಾರಾದ್ರೂ ನಿನಗೆ ನಿರಂತರ ಸಂದೇಶ ಕಳಿಸ್ತಾ ನಿನ್ನನ್ನು ಫಾಲೋ ಮಾಡ್ತಿದ್ರೆ, ದಡ್ಡ , ಗಿಡ್ಡ , ಡುಮ್ಮಿ ಅಂತೆಲ್ಲ ಅವಹೇಳನ ಮಾಡ್ತಿದ್ರೆ, ಎಲ್ಲಿಗಾದರೂ ಕರೆದರೆ ಸುಮ್ಮನಿರಬಾರದು. ಇಂಥ ವಿಷಯಗಳನ್ನು ನಿನ್ನ ಅಮ್ಮ ಅಥವಾ ಅಪ್ಪನ ಹತ್ತಿರ ಕೂಡಲೇ ಹೇಳಬೇಕು.


ಆಯ್ತು ಅಂಕಲ್ ಇನ್ಮೇಲೆ ಹಾಗೇ ಮಾಡ್ತೀನಿ.
ಸರಿ. ಇನ್ನು ಅವರನ್ನೂ ಒಳಗೆ ಕರಿ.
ನಿಮ್ಮ ಮಗನಿಗೆ ಮೊಬೈಲ್ ಚಟದಿಂದ ಆಗುವ ತೊಂದರೆಗಳ ಬಗ್ಗೆ ಮುಖ್ಯವಾದ ಸಂಗತಿಗಳನ್ನು ಹೇಳಿದ್ದೀನಿ. ಅವನಿಗೆ ಅದು ಅರ್ಥವಾಗಿದೆ.
ಅರ್ಥವಾಗಲಿ ಬಿಡಲಿ. ನಾನಂತೂ ಅವನು ದೊಡ್ಡವನಾಗುವ ತನಕ ಅವನಿಗೆ ಮೊಬೈಲ್ ಕೊಡೋದಿಲ್ಲ.
ಹಾಗಂದ್ರೆ ಆಗೋದಿಲ್ಲ ಮನೋಜ್. ಮೊಬೈಲ್, ಟ್ಯಾಬ್, ಲ್ಯಾಪ್‌ಟಾಪ್ ಇವೆಲ್ಲ ಇಂದು ನಮ್ಮ ಜೀವನದ ಅನಿವಾರ್ಯ ಅಂಗವಾಗಿದೆ. ನೆಗಡಿಯಾಗುತ್ತೆ ಅಂತ ಮೂಗು ಕತ್ತರಿಸೋಕೆ ಆಗುತ್ತಾ?


ಹಾಗಾದ್ರೆ ಮೋಹಿತನ ಸಮಸ್ಯೆಗೆ ಏನು ಪರಿಹಾರ?
ನಿಮ್ಮ ಮಗ ಚಿಕ್ಕವನಾಗಿದ್ದಾಗ ಊಟ ಮಾಡಿಸೋದು ಸುಲಭ ಆಗುತ್ತೆ ಅಂತ ಮೊಬೈಲ್ ಕೊಟ್ಟವರು ನೀವೇ. ಅವನು ಬೋರಾಗುತ್ತೆ ಅಂದಾಗಲೆಲ್ಲ ನಿನ್ನ ಹತ್ರ ಆಡೋಕೆ ನನಗೆ ಸಮಯವಿಲ್ಲ, ಮೊಬೈಲ್‌ನಲ್ಲಿ ಆಡ್ಕೋ ಅಂದವರೂ ನೀವೇ. ಈಗ ಒಮ್ಮೆಲೇ ಮೊಬೈಲ್ ಪೂರ್ತಿ ಬಿಡು ಅನ್ನೋಕೆ ಆಗಲ್ಲ. ಅವನು ಮೊಬೈಲ್ ಬಳಸುವಾಗ ನೀವು ಪಕ್ಕದಲ್ಲೇ ಇದ್ದು ಮಾರ್ಗದರ್ಶನ ಮಾಡಬೇಕು.
ಹೌದಾ. ಇದು ನನಗೆ ಗೊತ್ತೇ ಇರಲಿಲ್ಲ.
ಮಕ್ಕಳಿಗೆ ಬೋರ್ ಆಗುತ್ತೆ ಅಂತ ಮೊಬೈಲ್ ಕೊಡಬೇಡಿ. ಮನೋವಿಜ್ಞಾನದ ಪ್ರಕಾರ ಮಕ್ಕಳಿಗೆ ಬೋರ್ ಆಗಬೇಕು. ಆಗಲೇ ಅವರಲ್ಲಿ ಸೃಜನಶೀಲತೆ ಬೆಳೆಯುತ್ತೆ.
ಥ್ಯಾಂಕ್ಸ್, ಅನೇಕ ಉಪಯುಕ್ತ ವಿಷಯಗಳನ್ನು ಹೇಳಿದಿರಿ.
ಮಕ್ಕಳಾಗಲೀ ದೊಡ್ಡವರಾಗಲೀ ಅಂತರ್ಜಾಲದಲ್ಲಿ ವ್ಯವಹರಿಸುವಾಗ ಬಹಳ ಎಚ್ಚರಿಕೆಯಿಂದ ಇರಬೇಕು. ಫೋನ್ ಕರೆ, ಸಂದೇಶ ಮತ್ತು ನಕಲಿ ಇಮೇಲ್‌ಗಳ ಮೂಲಕ ಹೊಂಚುಹಾಕುವ, ಬಲೆ ಹೆಣೆದು ಕಾಯುತ್ತಿರುವ ಸೈಬರ್ ವಂಚಕರ ಬಗ್ಗೆ ಎಚ್ಚರವಹಿಸಬೇಕು. ಸೈಬರ್ ಅಪರಾಧ ಸಂಭವಿಸಿದರೆ, ರಾಷ್ಟ್ರೀಯ ಸೈಬರ್ ಅಪರಾಧ ಸಹಾಯವಾಣಿ 1930 ಗೆ ಕರೆಮಾಡಿ ವರದಿ ಮಾಡಬೇಕು.



ಇಲ್ನೋಡಿ. ಎಲ್ಲಾ ಮೊಬೈಲ್‌ಗಳಲ್ಲೂ ಸೆಟ್ಟಿಂಗ್‌ನಲ್ಲಿ ಪೇರೆಂಟಲ್ ಕಂಟ್ರೋಲ್ ಅಂತ ಇರುತ್ತೆ. ಅದನ್ನು ಉಪಯೋಗಿಸಿ ಮಗನಿಗೆ ನೀವೇ ಅಕೌಂಟ್ ಮಾಡಿಕೊಡಿ. ಆಗ ನೀವು ಅವನ ಮೊಬೈಲ್ ಚಟುವಟಿಕೆಗಳನ್ನು ನಿಯಂತ್ರಿಸಬಹುದು.
ಆಗಲಿ ಸರ್. ಹಾಗೇ ಮಾಡ್ತೀವಿ.
(ಪಾರ್ಕಿನಲ್ಲಿ ಮೋಹಿತ್ ಮತ್ತು ರಕ್ಷಿತ್ )
ಅಂತೂ ಇವತ್ತು ಪುನಃ ಆಡೋಕೆ ಬಂದ್ಯಾ? ನಿನ್ನ ಮೊಬೈಲ್ ಎಲ್ಲಿ?
ಮೊಬೈಲ್ ಮನೇಲಿದೆ. ನನ್ನ ಇವತ್ತಿನ screen time ಮುಗೀತು. ಅದಕ್ಕೆ ಇಲ್ಲಿಗೆ ಬಂದೆ.
ಒಳ್ಳೇದಾಯ್ತು. ನನಗೂ ನಮ್ಮಪ್ಪ ಮೊಬೈಲ್ ಕೊಡ್ಸಿದ್ದಾರೆ.
ಹೌದಾ? ಕಂಗ್ರ್ಯಾಟ್ಸ್. ಮೊಬೈಲ್ ಹ್ಯಾಗಿದೆ ನೋಡೋಣ.
ಮೊಬೈಲ್ ಮನೇಲಿದೆ. ನನ್ನ ಇವತ್ತಿನ screen time ಕೂಡ ಮುಗೀತು. ಅದಕ್ಕೆ ಇಲ್ಲಿಗೆ ಬಂದೆ.
ಹಾಗಾದ್ರೆ ನಮ್ಮಿಬ್ರ ಪರಿಸ್ಥಿತಿ ಒಂದೇ ಅಂತಾಯ್ತು.
ಹೌದು. ನೀನು ಮೋಹಿತ, ನಾನು ರಕ್ಷಿತ, ಇಬ್ಬರ ಮೊಬೈಲೂ ಮನೆಯಲ್ಲೇ ಸುರಕ್ಷಿತ!
ಮುಗಿಯಿತು

"ಸೈಬರ್ ವಾರ್ತಿಕಾ"

**QR code scan ಮಾಡಿ ಉಚಿತ ಸುದ್ದಿಪತ್ರ ಪಡೆಯಿರಿ**





**Share this QR code with others to read this comic book online**

**CySecK Comic Handbook Feedback**

**ದಯವಿಟ್ಟು ನಿಮ್ಮ ಅನಿಸಿಕೆ ಹಂಚಿಕೊಳ್ಳಿ**

ಸೈಸೆಕ್ (CySecK) ಎಂಬುದು ಕರ್ನಾಟಕ ರಾಜ್ಯ ಸರ್ಕಾರದ ಸೈಬರ್ ಭದ್ರತೆಯಲ್ಲಿನ ಉನ್ನತ ಜ್ಞಾನ ಕೇಂದ್ರವಾಗಿದೆ. ಇದು ಐಐಎಸ್‌ಸಿ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್) ಸಂಸ್ಥೆಯ ಆವರಣದಲ್ಲಿದೆ. ಇದಕ್ಕೆ ಐಐಎಸ್‌ಸಿ ಸಂಸ್ಥೆಯ ಬೆಂಬಲವಿದ್ದು, ಕೆಎಸ್‌ಸಿಎಸ್‌ಟಿ (ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ) ಇದರ ಅನುಷ್ಠಾನ ಸಂಸ್ಥೆಯಾಗಿದೆ. ಕರ್ನಾಟಕ ಸರ್ಕಾರದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಸೇರಿದ ಕರ್ನಾಟಕ ಇನ್ನೊವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿಯು ಸೈಸೆಕ್ ಅನ್ನು ಹುಟ್ಟುಹಾಕಿದೆ.